# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.

ಜ್ಞಾನಸಹ್ಯಾದ್ರಿ, ಶಂಕರಘಟ್ಟ–577415, ಶಿವಮೊಗ್ಗ, ಕರ್ನಾಟಕ.

Phone No: 08282–256166, mob: 7022254993ಇ–ಮೇಲ್: regphdku@gmail.com, ವೆಬ್‌ಸೈಟ್: www.kuvempu.ac.in


**Re-Accredited by NAAC with 'A' Grade, Ranked 73rd Place in NIRF– 2019 and Secured 45th Place in SCIMAGO Institutional Rankings**

ಸಂಖ್ಯೆ: ಕುವಿ/ಪಿಹೆಚ್.ಡಿ–1/ 361 /2020–21 ದಿನಾಂಕ: 27–05–2020.

**ಸುತ್ತೋಲೆ**

**ವಿಷಯ:** ಕೋವಿಡ್–19 ಮಹಾಮಾರಿ ಸಾಂಕ್ರಾಮಿಕ ಖಾಯಿಲೆಯಿಂದ ಉಂಟಾದ ಪರಿಸ್ಥಿತಿಯಲ್ಲಿ ಸಂಶೋಧನಾರ್ಥಿಗಳು ಮೌಖಿಕ ಪರೀಕ್ಷೆ ನಡೆಸುವ ಕುರಿತು.

**ಉಲ್ಲೇಖ:1.** ಯುಜಿಸಿ ಮಾರ್ಗದರ್ಶಿಗಳು–DD/No.F.1-1/2020(Secy) ದಿನಾಂಕ:29–05–2020.

**2.** ದಿನಾಂಕ:15–05–2020, ದಿ:16–05–2020 ಮತ್ತು ದಿ:19–05–2020 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಿಕಾಯದ ಡೀನರು, ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಶಾಲಾ ನಿರ್ದೇಶಕರು, ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು ಮತ್ತು ಎಲ್ಲಾ ಅಧ್ಯಾಪಕರುಗಳು ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾದ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸದಸ್ಯರುಗಳೊಂದಿಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಸಭೆಯ ನಿರ್ಣಯ.

*****

ದೇಶಾದ್ಯಂತ ಕೋವಿಡ್–19 ಮಹಾಮಾರಿ ಸಾಂಕ್ರಾಮಿಕ ಖಾಯಿಲೆಯು ಹರಡುತ್ತಿದ್ದು, ಅದರಿಂದ ಉಂಟಾದ ಪರಿಸ್ಥಿತಿಯನ್ನು ವಿಶ್ವವಿದ್ಯಾಲಯವು ಸಮರ್ಥವಾಗಿ ಎದುರಿಸಬೇಕಾಗಿದೆ. ಆದ್ದರಿಂದ ಆರೋಗ್ಯದ ಕುರಿತು ಮುನ್ನೆಚ್ಚರಿಕೆ ವಹಿಸುವ ದಿಸೆಯಲ್ಲಿ ದಿನಾಂಕ:15–05–2020, ದಿ:16–05–2020 ಮತ್ತು ದಿ:19–05–2020 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಿಕಾಯದ ಡೀನರು, ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಶಾಲಾ ನಿರ್ದೇಶಕರು, ಪದವಿ ಕಾಲೇಜುಗಳ ಪ್ರಾಂಶುಪಾಲರುಗಳು ಮತ್ತು ಎಲ್ಲಾ ಅಧ್ಯಾಪಕರುಗಳು ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾದ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸದಸ್ಯರುಗಳೊಂದಿಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಸಭೆಯನ್ನು ನಡೆಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿರುತ್ತದೆ. ಸದರಿ ನಿರ್ಣಯಗಳನ್ನು ಚಾಚುತಪ್ಪದೆ ಪ್ರತಿಯೊಬ್ಬರು ಪಾಲಿಸುವಂತೆ ಈ ಮೂಲಕ ಸೂಚಿಸಲಾಗಿದೆ.

1. ಲಾಕ್‌ಡೌನ್ ಅವಧಿಯಲ್ಲಿ ಹಾಗೂ ಸಾಂಕ್ರಮಿಕ ರೋಗದ ಹರಡುವಿಕೆ ಆತಂಕದಲ್ಲಿ ಇರುವಂತಹ ಸಂದರ್ಭದಲ್ಲಿ ನಡೆಸಬೇಕಾದ ಪಿ.ಹೆಚ್.ಡಿ ಮೌಖಿಕ ಪರೀಕ್ಷೆಯನ್ನು ಬಾಹ್ಯ ಪರೀಕ್ಷಕರ ಉಪಸ್ಥಿತಿಯಲ್ಲಿ ನಡೆಸಲು ಸಾಧ್ಯವಾಗದಿರುವುದರಿಂದ ಅದರ ಬದಲು ವಿಭಾಗದಲ್ಲಿ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆದು ವಿದ್ಯುನ್ಮಾನದ ಮೂಲಕ ಅಂದರೆ Google, Skype, Microsoft Technology ಅಥವಾ ಇತರೆ ನಂಬಲಾರ್ಹ ಮತ್ತು ಪರಸ್ಪರ ಒಪ್ಪಿಗೆಯಾದ ತಾಂತ್ರಿಕತೆಯನ್ನು ಬಳಸಿಕೊಂಡು ನಿರ್ವಹಿಸಬಹುದು.ಸದರಿ Video Conference ಮೂಲಕ ನಡೆಸುವ ಮೌಖಿಕ ಪರೀಕ್ಷೆಗೆ ವಿಭಾಗದ , ಉಪನ್ಯಾಸಕ ವೃಂದ, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಆಸಕ್ತರು ಭಾಗವಹಿಸಲು ಅವಕಾಶ ನೀಡುವುದು.ಇದರ ದಾಖಲೆ ನಡವಳಿಗೆ ಲಗತ್ತಿಸುವುದು. ಹಾಗೂ ಮೌಖಿಕ ಪರೀಕ್ಷೆಯ ನಡವಳಿಯನ್ನು ಮಾರ್ಗದರ್ಶಕರು, ಸಹ–ಮಾರ್ಗದರ್ಶಕರು, ಹಾಗೂ ಬಾಹ್ಯ ಪರೀಕ್ಷಕರ ಸಹಿ ಪಡೆದು ಈ ಕಛೇರಿಗೆ ಸಲ್ಲಿಸುವುದು.

2. ಯು.ಜಿ.ಸಿ.ಯ ಸೂಚನೆಯಂತೆ, ಕೋವಿಡ್–19 ರ ಸಾಂಕ್ರಾಮಿಕ ರೋಗದ ಹರಡುವಿಕೆ ಅವಧಿಯಲ್ಲಿ ಅಂದರೆ ಲಾಕ್‌ಡೌನ್ ಅವಧಿಯಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಹಾ ಪ್ರಬಂಧ ಸಲ್ಲಿಸಲು ಸಾಧ್ಯವಾಗದೇ ಇದ್ದ ಪಕ್ಷದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಲಾಕ್‌ಡೌನ್ ನಂತರದ 06 ತಿಂಗಳ ಅವಧಿಯನ್ನು ವಿಸ್ತರಿಸಲಾಗಿದೆ. ಈ ವ್ಯಾಸಂಗಾವಧಿ ವಿಸ್ತರಣೆಗೆ ಯಾವುದೇ ಶುಲ್ಕ ವಿಧಿಸಲಾಗುವುದಿಲ್ಲ ಎಂಬ ಅಂಶವನ್ನು ವಿದ್ಯಾರ್ಥಿಗಳ ಗಮನಕ್ಕೆ ತರುವುದು. ಹಾಗೂ ಅಂತಹ ಮನವಿಗಳನ್ನು ಕುಲಸಚಿವರು(ಪ) ರವರಿಗೆ ಸಲ್ಲಿಸುವುದು.

ಕುಲಸಚಿವರು(ಪರೀಕ್ಷಾಂಗ)

ಕುಲಸಚಿವ (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ,
ಜ್ಞಾನಸಹ್ಯಾದ್ರಿ,
ಶಂಕರಘಟ್ಟ - 577 451.

27/5/20

ಇವರಿಗೆ,

01. ಎಲ್ಲಾ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರುಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,ಶಿವಮೊಗ್ಗ,ಕಡೂರು.
02. ಪ್ರಾಂಶುಪಾಲರು, ಸಹ್ಯಾದ್ರಿ ವಿಜ್ಞಾನ/ ಕಲಾ / ವಾಣಿಜ್ಯ ಕಾಲೇಜು , ಶಿವಮೊಗ್ಗ.
03. ನಿರ್ದೇಶಕರು, ವಿ.ವಿ ಸ್ನಾತಕೋತ್ತರ ಕೇಂದ್ರ ,ಕಡೂರು, ತೊಳಹುಣಸೆ,ಕಡೂರು
04. ಕಛೇರಿ ಪ್ರತಿ.